**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಂ ವಿ.ಸಿ.ನಂಃ 882/2024**

ಪಿಡಬ್ಲ್ಯೂ- 1

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 28.08.2026**

**ಪಾಟೀ ಸವಾಲುಃ 1ನೇ ಎದುರುದಾರರ ಪರ ವಕೀಲರಿಂದಃ ಶ್ರೀ ಕೆ ವಿ ಬಿ ವಕೀಲರಿಂದ**

ಮೋಟಾರ್ ಸೈಕಲ್ ನನ್ನ ಹೆಸರಿಗೆ ಇದ್ದು . ನಾನೇ ಅದರ ಮಾಲೀಕ. ಮೋಟಾರ್ ಸೈಕಲ್ ಚಾಲನೆ ಮಾಡಲು ಡಿಎಲ್ ಹೊಂದಿದ್ದು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ನಾನು ಡಿ ಎಲ್ ಮಾಡಿಸಿಕೊಂಡು 7 ವರ್ಷಗಳಾಗಿವೆ. ನಾನು ಚಾಲನೆ ಮಾಡುತ್ತಿದ್ದ ಮೋಟಾರ್ ಸೈಕಲ್ ಗೆ ವಿಮೆ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದರಿ ವಿಮೆ ಯಾವ ಕಂಪನಿಯದ್ದು ಎಂದು ನನಗೆ ಗೊತ್ತಿಲ್ಲ. ಆ ದಿನ ನಾನು ಮೋಟಾರ್ ಸೈಕಲ್ ಚಾಲನೆ ಮಾಡಿಕೊಂಡು ಮನೆಯಿಂದ ನಮ್ಮ ಹೊಲದ ಹತ್ತಿರಕ್ಕೆ ಹೋಗುತ್ತಿದ್ದೆನು. ಅಪಘಾತವಾದ ಬಳಿಕ ನನ್ನನ್ನು ನಮ್ಮ ಗ್ರಾಮದ ಪ್ರದೀಪ್ ಎಂಬಾತ ಮಂಗಳ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗಾಗಿ ದಾಖಲು ಮಾಡಿರುತ್ತಾರೆ. ನನ್ನನ್ನು ಆಸ್ಪತ್ರೆಗೆ ಕರೆದುಬಂದು ದಾಖಲು ಮಾಡಿದಾಗ ನನಗೆ ಪ್ರಜ್ಞೆ ಇರಲಿಲ್ಲ. ನನ್ನನ್ನು ಆಸ್ಪತ್ರೆಗೆ ದಾಖಲು ಮಾಡಿದ 1ವರೆ ತಾಸು ಬಳಿಕ ನನಗೆ ಪ್ರಜ್ಞೆ ಬಂದಿರುತ್ತದೆ. ನನಗೆ ಪ್ರಜ್ಞೆ ಬಂದ ಬಳಿಕ ವೈದ್ಯಾಧಿಕಾರಿಯವರಿಗೆ ಯಾವ ರೀತಿ ಅಪಘಾತವಾಗಿದೆ ಎಂದು ಹೇಳಿದ್ದೇನೆ. ಅಪಘಾತವಾದ ದಿನದಂದು ನಾನು ಚಿಕಿತ್ಸೆ ಪಡೆಯುವ ಸಮಯದಲ್ಲಿ ನನ್ನ ಕುಟುಂಬದವರು ನನ್ನನ್ನು ನೋಡಲು ಆಸ್ಪತ್ರೆಗೆ ಬಂದಿದ್ದರು. ನಾನು ಆಸ್ಪತ್ರೆಗೆ ದಾಖಲಾದ ಬಳಿಕ ನನ್ನ ಹೆಂಡತಿ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತಾರೆ. ನನ್ನ ಹೆಂಡತಿ ಗುರುವಾರದಂದು ದೂರನ್ನು ನೀಡಿರುತ್ತಾರೆ. ದಿಃ 23-02-2024ರಂದು ನನ್ನ ಹೆಂಡತಿ

ಪೊಲೀಸರಿಗೆ ದೂರು ನೀಡಿರುತ್ತಾರೆ. ನನಗೆ ಯಾವುದೇ ಅಪಘಾತವಾಗಿರುವುದಿಲ್ಲ ಬದಲಾಗಿ ನಾನೇ ಬಿದ್ದು ಅಪಘಾತ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

2. ನಾನು ವ್ಯವಸಾಯ ಹಾಗೂ ಹೈನುಗಾರಿಕೆ ಮಾಡುತ್ತಿದ್ದೇನೆಂಬುದಕ್ಕೆ ದಾಖಲೆಗಳಾದ ಹಾಲು ಉತ್ಪಾದಕರ ಸಹಕಾರ ಸಂಘದವರು ನೀಡಿದ ದಾಖಲೆಯನ್ನು ಸಲ್ಲಿಸಿರುತ್ತೇನೆ. ಈಗಲೂ ನಾನು ಪ್ರತಿನಿತ್ಯ ಹಾಲನ್ನು ಹಾಕುತ್ತಿರುತ್ತೇನೆ. ಅಪಘಾತದಲ್ಲಿ ನನಗೆ ಆಗಿದ್ದ ಗಾಯಗಳು ವಾಸಿಯಾಗಿದ್ದು ಈಗ ನಾನು ಮೊದಲಿನಂತೆ ಚೆನ್ನಾಗಿದ್ದೆನೆಂದು ಸೂಚಿಸುವುದು ಸರಿಯಲ್ಲ. ನಾನು ಹಾಜರು ಪಡಿಸಿರುವ ಔಷಧಿ ಬಿಲ್ಲುಗಳು ಜೆರಾಕ್ಸ್ ಪ್ರತಿ ಇದ್ದು ಸಹಿ ಮತ್ತು ಸೀಲು ಇರುವುದಿಲ್ಲವೆಂದು ಸೂಚಿಸುವುದು ಸರಿಯಲ್ಲ.

3. ಅಪಘಾತ ಪಡಿಸಿದ ಮೋಟಾರ್ ಬೈಕ್ ನಂಃ 3959. ನಾನು ಹೇಳಿದಂತಹ ಮೋಟಾರ್ ಬೈಕ್ ಅಪಘಾತಪಡಿಸಿರುವುದಿಲ್ಲ ಬದಲಾಗಿ ನಾನೇ ಬಿದ್ದು ಗಾಯ ಪಡಿಸಿಕೊಂಡಿದ್ದೇನೆಂದು ಸೂಚಿಸುವುದು ಸರಿಯಲ್ಲ. ನಾನು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ಬಳಿಕ ವೈದ್ಯರು ಆಗಾಗ್ಗೆ ಬಂದು ತೋರಿಸಿಕೊಂಡು ಹೋಗುವಂತೆ ಸೂಚಿಸಿದರು ಎಂದರೆ ಸರಿ. ಅ ರೀತಿ ನಾನು ಮುಂದುವರೆದ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಎಕ್ಸರೆಗಳನ್ನು ಹಾಗೂ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ವೈದ್ಯರೊಂದಿಗೆ ಷರೀಕ್ಕಾಗಿ ಸುಳ್ಳು ಬಿಲ್ಲುಗಳನ್ನು ಸೃಷ್ಟಿ ಮಾಡಿಕೊಂಡು ಬಂದು ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ಬೈಕ್ ಚಾಲನೆ ಮಾಡಲು ನನಗೆ ಡಿಎಲ್ ಇರಲಿಲ್ಲ, ಕಾರಣ ನಾನೇ ಬಿದ್ದು ಗಾಯ ಪಡಿಸಿಕೊಂಡು ಸುಳ್ಳು ಪ್ರಕರಣವನ್ನು ಪರಿಹಾರಕ್ಕಾಗಿ ದಾಖಲು ಮಾಡಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತಿತದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ .</u>**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.